ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 23-5-2017

## ಪತ್ರಿಕಾ ಆಮಂತ್ರಣ

**ಅಗ್ನಿಶಾಮಕ ಹಾಗೂ ಅಗ್ನಿಶಾಮಕ ಚಾಲಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ:**

**ಮುಖ್ಯ ಅತಿಥಿಗಳು:**

**ಶ್ರೀಮತಿ ನೀಲಮಣಿ ಎನ್. ರಾಜು,**
**ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು**
**ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು,**
**ಮಹಾ ಸಮಾದೇಷ್ಟರು, ಗೃಹ ರಕ್ಷಕ ದಳ, ನಿರ್ದೇಶಕರು ಪೌರರಕ್ಷಣೆ ಹಾಗೂ**
**ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ, ಬೆಂಗಳೂರು**

**ಉಪಸ್ಥಿತರು:**
**ಶ್ರೀ ಸೌಮೇಂದು ಮುಖರ್ಜಿ,**
**ಪೊಲೀಸ್ ಮಹಾ ನಿರೀಕ್ಷಕರು ಹಾಗೂ ಹೆಚ್ಚುವರಿ ಮಹಾ ನಿರ್ದೇಶಕರು**
**ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು**

**ಟಿ. ಆರ್. ಸುರೇಶ್,**
**ಆರಕ್ಷಕ ಉಪ ಮಹಾ ನಿರೀಕ್ಷಕರು,**
**ಅಗ್ನಿಶಾಮಕ ಮತ್ತು ತುರ್ತು ಸೇವೆಗಳು**

**ದಿನಾಂಕ: 24-5-2017 ಬುಧವಾರ, ಬೆಳಿಗ್ಗೆ 8-30 ಗಂಟೆಗೆ**

**ಸ್ಥಳ: ಆರ್.ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ,**
**ಬನ್ನೇರುಘಟ್ಟ ರಸ್ತೆ, ಬೆಂಗಳೂರು –560 029**

## ಪತ್ರಿಕಾ ಪ್ರಕಟಣೆ

# ತಾರತಮ್ಯ ಸಾಮಾಜಿಕ ವ್ಯವಸ್ಥೆಯ ಕೊಡುಗೆ- ದಲೈ ಲಾಮಾ

ಬೆಂಗಳೂರು, ಮೇ 23 (ಕರ್ನಾಟಕ ವಾರ್ತೆ)- ಯಾವ ಧರ್ಮವೂ ಸಾಮಾಜಿಕ ತಾರತಮ್ಯವನ್ನು ಬೋಧಿಸುವುದಿಲ್ಲ; ಅದು ಸಾಮಾಜಿಕ ವ್ಯವಸ್ಥೆಯ ಕೊಡುಗೆ, ಊಳಿಗಮಾನ್ಯ ಪದ್ಧತಿಯ ಪರಿಣಾಮ ಎಂದು ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಧರ್ಮ ಗುರು ದಲೈ ಲಾಮಾ ಅವರು ಅಭಿಪ್ರಾಯಪಟ್ಟರು.

ಅವರು ಇಂದು ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 125ನೇ ಜನ್ಮವರ್ಷಾಚರಣೆ ಮತ್ತು ಅಂತರರಾಷ್ಟ್ರೀಯ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ "ಸಾಮಾಜಿಕ ನ್ಯಾಯ ಮತ್ತು ಡಾ. ಬಿ.ಆರ್. ಅಂಬೇಡ್ಕರ್" ಎಂಬ ವಿಷಯದ ಕುರಿತ ರಾಜ್ಯ ಮಟ್ಟದ ವಿಚಾರಸಂಕಿರಣದಲ್ಲಿ ಪ್ರಧಾನ ಭಾಷಣ ಮಾಡಿದರು. ಜಾತಿ ವ್ಯವಸ್ಥೆಯು ಶೋಷಣೆಯ ಅಸ್ತ್ರವಾಗಿ ಬಳಕೆಯಾಗುತ್ತಿದೆ ಎಂದು ವಿಷಾದಿಸಿದ ಅವರು, ಶೋಷಿತ ವರ್ಗದವರು ಆತ್ಮವಿಶ್ವಾಸ, ಪರಿಶ್ರಮ ಮತ್ತು ಶಿಕ್ಷಣದ ಮೂಲಕ ಸಮಾನತೆಯನ್ನು ಸಾಧಿಸಬೇಕು ಎಂದು ಸಲಹೆ ನೀಡಿದರು.

ಪ್ರಾಚೀನ ನಾಗರಿಕತೆಗಳಲ್ಲಿ ಸಿಂಧೂ ಕಣಿವೆ ನಾಗರಿಕತೆ ಅತ್ಯಂತ ಅಭಿವೃದ್ಧಿ ಹೊಂದಿದ ನಾಗರೀಕತೆಯಾಗಿತ್ತು. ವಿಶ್ವಕ್ಕೆ ಮಾದರಿಯಾಗಿತ್ತು. ಜ್ಞಾನ ಮತ್ತು ಅದರ ಬಳಕೆಗೆ ಭಾರತ ಹೆಸರುವಾಸಿಯಾಗಿದೆ ಎಂದ ಅವರು ಭಾರತವನ್ನು ಗುರು ಹಾಗೂ ಟಿಬೆಟ್‌ನ್ನು ಶಿಷ್ಯನಿಗೆ ಹೋಲಿಸಿದರು. ಟಿಬೆಟ್ ಭಾರತದ ವಿಧೇಯ ಶಿಷ್ಯ. ಸತತ ಅಧ್ಯಯನದಿಂದ ಭಾರತದ ಪ್ರಾಚೀನ ಪರಂಪರೆಯನ್ನು ಕಾಪಿಡುವ ಕೆಲಸ ಮಾಡಿದ್ದೇವೆ ಎಂದು ಬಣ್ಣಿಸಿದರು.

ಬುದ್ಧ ಧರ್ಮ ಭಾರತೀಯ ಧರ್ಮ. ಪ್ರಾಚೀನ ಭಾರತೀಯ ಜ್ಞಾನದ ಪುನರುತ್ಥಾನ ಇಂದಿನ ಅಗತ್ಯವಾಗಿದೆ. ಕರುಣೆ ಮತ್ತು ಅಹಿಂಸೆ ಎಲ್ಲ ಧರ್ಮಗಳ ಸಾರ. ಎಲ್ಲ ಧರ್ಮಗಳ ತಾತ್ವಿಕ ನೆಲೆಗಟ್ಟು ಬೇರೆಯಾದರೂ ಸೌಹಾರ್ದತೆ, ಶಾಂತಿಯೇ ಅವುಗಳ ತಿರುಳು ಎಂದು ಅವರು ವಿವರಿಸಿದರು.

ಆಧುನಿಕ ವಿಜ್ಞಾನ, ತಂತ್ರಜ್ಞಾನ, ಸೌಕರ್ಯಗಳು ಭೌತಿಕ ಸುಖ ನೀಡಿದರೆ, ಅದರೊಂದಿಗೆ ಪ್ರಾಚೀನ ಭಾರತದ ಜ್ಞಾನವು ಆಂತರಿಕ ಶಾಂತಿಯನ್ನು ಕಾಪಾಡುತ್ತದೆ. ಇವೆರಡೂ ಜೊತೆಯಾದಾಗ ಬದುಕು ಸುಂದರವಾಗಿರುತ್ತದೆ. ಇಂದು ಮನುಷ್ಯರೆಲ್ಲಾ ಒಂದೇ ಎಂಬ ಮನೋಭಾವದ ಕೊರತೆಯೇ ಎಲ್ಲ ಸಮಸ್ಯೆಗಳಿಗೆ ಮೂಲ ಎಂದು ಅವರು ತಿಳಿಸಿದರು.

ಭಾರತೀಯ ಸಂವಿಧಾನವನ್ನು ಅದ್ಭುತವೆಂದು ಬಣ್ಣಿಸಿದ ಅವರು ಅರಿವು ಮತ್ತು ಪರಂಪರೆ ಜೊತೆಯಾಗಿ ಬೆಳೆಯಬೇಕು ಎಂದು ಹಾರೈಸಿದರು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯ, ಮೀಸಲಾತಿಯ ವಿಷಯಗಳು ಜಾತಿ ವ್ಯವಸ್ಥೆಯೊಂದಿಗೆ ತಳುಕು ಹಾಕಿಕೊಂಡಿದೆ. ಈ ಬಗ್ಗೆ ಮೇಲ್ವರ್ಗದವರು, ಶೋಷಿತರು ಒಟ್ಟಾಗಿ ಚಿಂತನೆ ಮಾಡಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆ ಜೀವಂತವಾಗಿರುವ ವರೆಗೆ ಮೀಸಲಾತಿ ಇರಲೇ ಬೇಕು ಎಂದು ಪ್ರತಿಪಾದಿಸಿದ್ದರು. ಅಧಿಕಾರ ಶ್ರೀಮಂತರ ಕೈಯಲ್ಲೇ ಇರಬಾರದು, ಎಲ್ಲರಿಗೂ ಹಂಚಿಕೆಯಾಗಬೇಕು ಎಂದು ಅವರು ಹೇಳಿದ್ದರು. ಅಲ್ಲದೆ, ಸಂವಿಧಾನದಲ್ಲಿ ಎಲ್ಲರಿಗೂ ಅಧಿಕಾರ

ನೀಡುವ ಅವಕಾಶ ಕಲ್ಪಿಸಿದರು. ಎಲ್ಲರೂ ಈ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕು ಅಲ್ಲದೆ, ಅವಕಾಶ ವಂಚಿತರ ಪರವಾಗಿ ಕೆಲಸ ಮಾಡಬೇಕು. ಇದು ನಾವು ಅಂಬೇಡ್ಕರರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಜಾತಿ ವ್ಯವಸ್ಥೆ ಹೋದರೆ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯ. ರಾಜಕೀಯ ಸ್ವಾತಂತ್ರ್ಯದೊಂದಿಗೆ ಸಾಮಾಜಿಕ ಸ್ವಾತಂತ್ರ್ಯವೂ ಬೇಕು. ಆಗ ಆರ್ಥಿಕ ಸ್ವಾತಂತ್ರ್ಯವೂ ಬರುವುದು ಎಂದು ಅವರು ತಿಳಿಸಿದರು.

ಸಾಮಾಜಿಕ ಕಂದರ ಏರ್ಪಡಲು ಜಾತಿ ವ್ಯವಸ್ಥೆ ಕಾರಣ. ತಾರತಮ್ಯ, ದೌರ್ಜನ್ಯ ನಿವಾರಣೆ ಕೇವಲ ಕಾನೂನಿನಿಂದ ಮಾತ್ರ ಸಾಧ್ಯವಿಲ್ಲ. ಆಚರಣೆ ಮಾಡುವವರೂ ಕೂಡ ಅರಿತುಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ನುಡಿದರು.

ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವವರಿಗೆ ಸ್ಫೂರ್ತಿ ಅಂಬೇಡ್ಕರ್ ಅವರು. ಅವರಿಲ್ಲದೆ ಇದ್ದರೆ, ಸಾಮಾಜಿಕ ನ್ಯಾಯ, ಸಮಾನತೆ, ಭ್ರಾತೃತ್ವದ ತಳಹದಿಯಲ್ಲಿ ಸಂವಿಧಾನ ಜಾರಿಗೆ ಬರುತ್ತಿರಲಿಲ್ಲ. ಅಂಬೇಡ್ಕರರಿಗೆ ಅಂಬೇಡ್ಕರರೇ ಸಾಟಿ ಎಂದು ಬಣ್ಣಿಸಿದರು.

ಲೋಕಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿ, ರಾಜಕೀಯದಲ್ಲಿ ಸಕ್ರಿಯರಾಗಿದ್ದ ಏಕೈಕ ನುರಿತ ಆರ್ಥಿಕ ತಜ್ಞ ಅಂಬೇಡ್ಕರ್ ಅವರು, ಸಂವಿಧಾನದ ಪಿತಾಮಹ. ದಲಿತರ ವಿಮೋಚನೆಗಾಗಿ ಹೋರಾಡಿದವರು ಎಂದು ಅವರನ್ನು ಗುರುತಿಸಲಾಗುತ್ತದೆ. ಆದರೆ ಅದನ್ನೂ ಮೀರಿ ಅಭಿವೃದ್ಧಿಯ ವಿಚಾರಗಳಲ್ಲೂ, ವಿಶೇಷವಾಗಿ ನೀರಾವರಿಗೆ ಸಂಬಂಧಿಸಿದಂತೆ ಪರಿಣತಿ ಹೊಂದಿದ್ದರು. ದಾಮೋದರ ಕಣಿವೆ ಯೋಜನೆ ಹಾಗೂ ಹಿರಾಕುಡ್ ಅಣೆಕಟ್ಟು ಯೋಜನೆಗಳಿಗೆ ಅವರು ಆದ್ಯತೆ ನೀಡಿದ್ದು, ಇದಕ್ಕೆ ಸಾಕ್ಷಿ ಎಂದು ಅವರು ವಿವರಿಸಿದರು.

ಸ್ವತಃ ಸಾಮಾಜಿಕ ತಾರತಮ್ಯಗಳಿಗೆ ಬಲಿಪಶುವಾಗಿದ್ದ ಅಂಬೇಡ್ಕರ್ ಅವರು ದಲಿತರ ವಿಮೋಚನೆಗಾಗಿ ಹೋರಾಡಿದರು, ಮಾತ್ರವಲ್ಲ. ಅವರು ಅಪ್ಪಟ ದೇಶಪ್ರೇಮಿಯಾಗಿದ್ದರು. ಅವರು ದಲಿತರಿಗಾಗಿ ಮೇಲ್ಜಾತಿಯವರ ವಿರುದ್ಧ ಮಾತ್ರವಲ್ಲ, ಬ್ರಿಟಿಷರ ವಿರುದ್ಧವೂ ಹೋರಾಡಿದರು. ಇವರ ವಿಚಾರಗಳು, ಪ್ರತಿಪಾದನೆಗಳು ವಾಸ್ತವಾಂಶಗಳನ್ನು ಆಧರಿಸಿದ್ದವು. ಈ ಕಾರಣಕ್ಕಾಗಿಯೇ ಬ್ರಿಟಿಷರು ಇವರನ್ನು ದೇಶ ವಿಭಜನೆಗೆ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ಬಣ್ಣಿಸಿದರು.

ಶೋಷಿತ ವರ್ಗದವರಿಗೆ ರಾಜಕೀಯ ಅಧಿಕಾರ ಒದಗಿಸಲು ಅಂಬೇಡ್ಕರರೇ ಮೂಲ ಕಾರಣ. ತಾರತಮ್ಯ ನಿವಾರಣೆಗೆ ಶಿಕ್ಷಣ ಅತ್ಯಂತ ಮಹತ್ವಪೂರ್ಣ ಎಂದು ಅವರು ಅರಿತಿದ್ದರು ಎಂದು ತಿಳಿಸಿದರು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಮಾತನಾಡಿ, ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಈ ದಿಸೆಯಲ್ಲಿ ಗುಡಿಸಲುಗಳಲ್ಲಿ ಈಗಲೂ ವಾಸಿಸುತ್ತಿರುವ ಎಲ್ಲ ಪರಿಶಿಷ್ಟ ಜಾತಿ/ಪಂಗಡದವರಿಗೆ ಮನೆ ಒದಗಿಸಲು ಸರ್ಕಾರ ಯೋಜನೆ ರೂಪಿಸಿದೆ. ಸುಮಾರು 4 ಲಕ್ಷ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಅಂತೆಯೇ ಸರ್ಕಾರವು ಶೋಷಿತ ವರ್ಗದವರಿಗಾಗಿ ರೂಪಿಸಿರುವ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ವಿವರಿಸಿದರು.

ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಪಿ. ಮಣಿವಣ್ಣನ್ ಮತ್ತಿತರರು ಉಪಸ್ಥಿತರಿದ್ದರು.

ಎಂಎಸ್:ಜೆಡಿ

# ಅರ್ಜಿ ಆಹ್ವಾನ

**ಬೆಂಗಳೂರು, ಮೇ 23, (ಕರ್ನಾಟಕ ವಾರ್ತೆ)**

**ಎಸ್.ಜೆ. ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್‌ಗೆ 2017-2018 ನೇ ಸಾಲಿನ ಪ್ರಥಮ ವರ್ಷದ(ಸಂಜೆ) ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯೆಯು ದಿನಾಂಕ 25-5-2017 ರ ವರೆಗೆ ನಡೆಯಲಿದೆ.**

**ಅರ್ಜಿಗಳನ್ನು www.dte.kar.nic.in ಮತ್ತು www.kea.kar.nic.in ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 25-5-2017ರ ಸಂಜೆ 5-30ರ ಒಳಗಾಗಿ ಸಲ್ಲಿಸತಕ್ಕದ್ದು ಅಥವಾ ಪ್ರಾಂಶುಪಾಲರ ಕಛೇರಿ, ಸರ್ಕಾರಿ ಎಸ್.ಜೆ. (ಸಂಜೆ)ಪಾಲಿಟೆಕ್ನಿಕ್, ಶೇಷಾದ್ರಿ ರಸ್ತೆ, ಬೆಂಗಳೂರು-560 001 ಇಲ್ಲಿಂದ ಪಡೆಯಬಹುದೆಂದು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.**

# ರಾಜ್ಯದಲ್ಲಿ ದಾಖಲು ತೊಗರಿ ಉತ್ಪಾದನೆ: ಹೆಚ್ಚುವರಿ ತೊಗರಿಯನ್ನು ಖರೀದಿಸಲು ಶೀಘ್ರಕ್ರಮ - ಟಿ.ಬಿ. ಜಯಚಂದ್ರ

**ಬೆಂಗಳೂರು, ಮೇ 23, (ಕರ್ನಾಟಕ ವಾರ್ತೆ)**

**ರಾಜ್ಯದ 12 ಜಿಲ್ಲೆಗಳಲ್ಲಿ ಈ ಬಾರಿ ಬಂಪರ್ ತೊಗರಿ ಉತ್ಪಾದನೆಯಾಗಿದ್ದು ಇದುವರೆವಿಗೆ 31.32 ಲಕ್ಷ ಕ್ವಿಂಟಾಲ್ ತೊಗರಿಯನ್ನು ಪ್ರತಿ ಕ್ವಿಂಟಾಲ್‌ಗೆ 450 ರೂಪಾಯಿ ರಾಜ್ಯದ ಪ್ರೋತ್ಸಾಹಧನ ಸೇರಿದಂತೆ 5500 ರೂ ದರದಲ್ಲಿ ತೊಗರಿ ಖರೀದಿಸಲಾಗಿದೆ ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ಅವರು ತಿಳಿಸಿದರು.**

**ವಿಧಾನ ಸೌಧದಲ್ಲಿ ಇಂದು ಬೆಲೆ ಸ್ಥಿರಿಕರಣ ಕುರಿತ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಸಂಪುಟ ಉಪ ಸಮಿತಿ ಸಭೆಯ ನಂತರ ಬೇಟಿಯಾದ ಸುದ್ಧಿಗಾರರಿಗೆ ಈ ವಿಷಯ ತಿಳಿಸಿದರು.**

ಕಲಬುರಗಿ ವಿಭಾಗ ಮತ್ತು ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿ ಈ ಭಾರಿ 101 ಲಕ್ಷ ಕ್ವಿಂಟಾಲ್ ತೊಗರಿ ಉತ್ಪಾದನೆಯಾಗಿದೆ ರಾಜ್ಯ ಸರ್ಕಾರ ದಾಖಲು ಉತ್ಪನ್ನವನ್ನು ಖರೀದಿಸಲಾಗಿದೆ. ಆದರೂ 42.48 ಲಕ್ಷ ಕ್ವಿಂಟಾಲ್ ಬೆಳೆ ಇದ್ದು ಇದನ್ನು ಖರೀದಿಸಲು ಕೇಂದ್ರ ಅನುಮತಿ ಕೋರಲಾಗಿದ್ದು ಶೀಘ್ರದಲ್ಲಿ ಖರೀದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಖರೀದಿಗೆ ಅನುಮತಿ ನೀಡಿದ್ದಲ್ಲಿ ರಾಜ್ಯ ಸಚಿವ ಸಂಪುಟದ ಒಪ್ಪಿಗೆ ಪಡೆದು ಪ್ರೋತ್ಸಾಹಧನ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ರಾಜ್ಯದಲ್ಲಿ ಬಂಪರ್ ತೊಗರಿಬೆಳೆ ಬಂದಿರುವ ಹಿನ್ನೆಲೆಯಲ್ಲಿ 1.10 ಕೋಟಿ ಕುಟುಂಬಗಳಿಗೆ ತಲಾ ಒಂದು ಕೆ.ಜಿ.ಯಂತೆ ತೊಗರಿ ಬೇಳೆಯನ್ನು ವಿತರಿಸಿದಲ್ಲಿ ಸರ್ಕಾರದ ಮೇಲೆ 1,100 ಕೋಟಿ ರೂಪಾಯಿ ಹೊರೆಯಾಗಲಿದ್ದು ಕೇಂದ್ರ ಅಗತ್ಯ ಸಹಾಯಧನ ನೀಡುವ ಬಗ್ಗೆ ಮನವಿ ಮಾಡಲಾಗುವುದು ಎಂದರು. ಅಲ್ಲದೆ ಪಡಿತರ ಚೀಟಿದಾರರಿಗೆ ಪ್ರತಿ ಕೆ.ಜಿ.ಗೆ 30 ರೂ. ರಿಯಾಯಿತಿ ದರದಲ್ಲಿ ತೊಗರಿ ಬೇಳೆಯನ್ನು ನೀಡುವ ಬಗ್ಗೆ ಸಚಿವ ಸಂಪುಟಕ್ಕೆ ಶಿಫಾರಸ್ಸು ಮಾಡಲಾಯಿತು ಎಂದು ಸಚಿವರು ತಿಳಿಸಿದರು.

ಮೌಢ್ಯ ಪ್ರತಿಬಂಧಕ ಕಾಯ್ದೆ ಜಾರಿಗೆ ಸಂಬಂಧಿಸಿದಂತೆಯೂ ನನ್ನ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ರಚಿಸಲಾಗಿದ್ದು ಶೀಘ್ರ ಸಭೆ ಸೇರಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ಅವರು ತಿಳಿಸಿದರು.

ಎಂಎಸ್/ಕೆಪಿಪಿ/ಕೆಎಂ

## ಅಗ್ನಿಶಾಮಕ ಹಾಗೂ ಅಗ್ನಿಶಾಮಕ ಚಾಲಕ ಪ್ರಶಿಕ್ಷಣಾರ್ಥಿಗಳ

## ನಿರ್ಗಮನ ಪಥ ಸಂಚಲನ

ಬೆಂಗಳೂರು, ಮೇ 23, (ಕರ್ನಾಟಕ ವಾರ್ತೆ)

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಅಗ್ನಿಶಾಮಕ ಹಾಗೂ ಅಗ್ನಿಶಾಮಕ ಚಾಲಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನವನ್ನು ಮೇ 24 ರಂದು ಬೆಳಿಗ್ಗೆ 8–30 ಗಂಟೆಗೆ ಆರ್.ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು –560 029 ಇಲ್ಲಿ ಆಯೋಜಿಸಿದೆ.

2016 ನೇ ಸಾಲಿನಲ್ಲಿ, ಅಗ್ನಿಶಾಮಕ ಇಲಾಖೆಯಲ್ಲಿ ಅಗ್ನಿಶಾಮಕರ ಹಾಗೂ ಅಗ್ನಿಶಾಮಕ ಚಾಲಕರ ಆಯ್ಕೆ ಪ್ರಕ್ರಿಯೆ ನಡೆದಿದ್ದು, 331 ಅಗ್ನಿಶಾಮಕರು ಹಾಗೂ 119 ಅಗ್ನಿಶಾಮಕ ಚಾಲಕರುಗಳು ಸೇರಿ ಒಟ್ಟು 450 ಪ್ರಶಿಕ್ಷಣಾರ್ಥಿಗಳು ಸುಮಾರು 6 ತಿಂಗಳುಗಳ ಕಾಲ ಬುನಾದಿ ತರಬೇತಿ ಪಡೆದಿದ್ದು ವೃತ್ತಿ ಜೀವನಕ್ಕೆ ಕಾಲಿಡುತ್ತಿರುವ ಪ್ರಯುಕ್ತ ನಿರ್ಗಮನ ಪಥ ಸಂಚಲನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶ್ರೀಮತಿ ನೀಲಮಣಿ ಎನ್. ರಾಜು, ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು,ಮಹಾ ಸಮಾದೇಷ್ಟರು, ಗೃಹ ರಕ್ಷಕ ದಳ, ನಿರ್ದೇಶಕರು ಪೌರರಕ್ಷಣೆ ಹಾಗೂ ಮಹಾ ನಿರ್ದೇಶಕರು, ರಾಜ್ಯ ವಿಪತ್ತು ಸ್ಪಂದನಾ ಪಡೆ, ಬೆಂಗಳೂರು ಇವರು ಸಮಾರಂಭ ಮುಖ್ಯ ಅತಿಥಿಗಳಾಗಿರುವರು.

ಸಮಾರಂಭದಲ್ಲಿ ಶ್ರೀ ಸೌಮೇಂದು ಮುಖರ್ಜಿ, ಪೊಲೀಸ್ ಮಹಾ ನಿರೀಕ್ಷಕರು ಹಾಗೂ ಹೆಚ್ಚುವರಿ ಮಹಾ ನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ಟಿ. ಆರ್. ಸುರೇಶ್, ಆರಕ್ಷಕ ಉಪ ಮಹಾ ನಿರೀಕ್ಷಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇವರು ಉಪಸ್ಥಿತರಿರುವರು.